**ಕರ್ನಾಟಕ ಸರ್ಕಾರ**

ಸಂಖ್ಯೆ: ಡಿಟಿಇ 06 ಇಎಸ್‌ಟಿ(1)ಬಿ 2013 ಭಾಗ-2 / 2333

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಅರಮನೆ ರಸ್ತೆ, ಬೆಂಗಳೂರು.
ದಿನಾಂಕ: 21-09-2013.

## : ತಿದ್ದುಪಡಿ ಜ್ಞಾಪನ :

ವಿಷಯ: ಸರ್ಕಾರಿ ಪಾಲಿಟೆಕ್ನಿಕಗಳಲ್ಲಿ ಎಐಸಿಟಿಇ ವೇತನ ಶ್ರೇಣಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ನಾತಕೋತ್ತರ ಪದವಿ(ಎಂ.ಟೆಕ್/ಎಂ.ಇ), ಎಂ.ಫಿಲ್. ಮತ್ತು ಪಿ.ಹೆಚ್.ಡಿ. ಪದವಿ ಪಡೆದ ಉಪನ್ಯಾಸಕರಿಗೆ ನಾನ್-ಕಾಂಪೌಂಡೆಡ್ ಮುಂಗಡ ವೇತನ ಬಡ್ತಿ ಮಂಜೂರು ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ: ಇಡಿ 118 ಡಿಟಿಇ 2010 ದಿ:31.3.2011.
2. ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ 6 ಇಎಸ್‌ಟಿ(1)ಬಿ 2013/1743-1744 ಭಾಗ-1 ದಿ: 29.7.2013.
3. ಈ ಕಛೇರಿ ಅಧಿಕೃತ ಜ್ಞಾಪನ ಸಂಖ್ಯೆ: ಡಿಟಿಇ 6 ಇಎಸ್‌ಟಿ(1)ಬಿ 2013/1743-1744 ಭಾಗ-2 ದಿ: 29.7.2013.
4. ಉಪನ್ಯಾಸಕರ ಮನವಿ ಪತ್ರ ದಿನಾಂಕ: 27.8.2013.

* * *

ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು, ಸ್ನಾತಕೋತ್ತರ ಪದವಿ (ಎಂ.ಟೆಕ್./ಎಂ.ಇ), ಎಂ.ಫಿಲ್. ಮತ್ತು ಪಿ.ಹೆಚ್.ಡಿ. ಪದವಿ ಪಡೆದ ಉಪನ್ಯಾಸಕರುಗಳಿಗೆ ನಾನ್- ಕಾಂಪೌಂಡೆಡ್ ಮುಂಗಡ ವೇತನ ಬಡ್ತಿ ಮಂಜೂರು ಮಾಡಲಾಗಿರುವ ಉಲ್ಲೇಖ(2) ಮತ್ತು (3)ರ ಈ ಕಛೇರಿ ಅಧಿಕೃತ ಜ್ಞಾಪನದಲ್ಲಿನ ಸಂಬಂಧಪಟ್ಟ ಉಪನ್ಯಾಸಕರುಗಳು ಹೊಂದಿರುವ ಪೇ-ಬ್ಯಾಂಡ್‌ನ ಪ್ರಾರಂಭಿಕ ವೇತನ ಮತ್ತು ಎಜಿಪಿಯ ಒಟ್ಟಾರೆ ಶೇ.3 ರಷ್ಟನ್ನು 01 ನಾನ್- ಕಾಂಪೌಂಡೆಡ್ ಮುಂಗಡ ವೇತನ ಬಡ್ತಿಗೆ ಪರಿಗಣಿಸತಕ್ಕದ್ದು ಮತ್ತು ಯಾವುದೇ ಭತ್ಯೆಯನ್ನು ಸೇರಿಸತಕ್ಕದ್ದಲ್ಲ ಎಂದು ಸೂಚಿಸಲಾಗಿತ್ತು. ಕೆಲವು ಉಪನ್ಯಾಸಕರು ಸಲ್ಲಿಸಿದ ಮನವಿಗಳನ್ನು ಪರಿಶೀಲಿಸಲಾಗಿ, ಪಾಲಿಟೆಕ್ನಿಕ್ ಉಪನ್ಯಾಸಕರಿಗೆ 2006ರ ಪರಿಷ್ಕೃತ ಎಐಸಿಟಿಇ ವೇತನ ಶ್ರೇಣಿ ಮಂಜೂರು ಮಾಡಲಾಗಿರುವ ಉಲ್ಲೇಖ(1)ರ ಸರ್ಕಾರದ ಆದೇಶದಲ್ಲಿ ನಾನ್- ಕಾಂಪೌಂಡೆಡ್ ಮುಂಗಡ ವೇತನ ಬಡ್ತಿ ಎಂದು ಮಾತ್ರ ಇರುವುದರಿಂದ ಉಲ್ಲೇಖ(2) ಮತ್ತು (3)ರ ಈ ಕಛೇರಿ ಅಧಿಕೃತ ಜ್ಞಾಪನದಲ್ಲಿ ನಮೂದಿಸಲಾಗಿರುವ "ಯಾವುದೇ ಭತ್ಯೆಯನ್ನು ಸೇರಿಸತಕ್ಕದ್ದಲ್ಲ" ಎಂಬ ವಾಕ್ಯವನ್ನು ಕೈಬಿಡಲಾಗಿದೆ. ಇನ್ನುಳಿದಂತೆ ಸದರಿ ಅಧಿಕೃತ ಜ್ಞಾಪನದಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ನಿರ್ದೇಶಕರು

ಇವರಿಗೆ,
1. ಮಹಾಲೇಖಪಾಲರು(ಎ&ಇ), ಲೆಕ್ಕಪರಿಶೋಧನೆ- 1, 2, ಕರ್ನಾಟಕ, ಬೆಂಗಳೂರು
2. ಸಂಬಂಧಪಟ್ಟ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್‌ಗಳ ಪ್ರಾಂಶುಪಾಲರಿಗೆ
3. ಸಂಬಂಧಪಟ್ಟ ಎಲ್ಲಾ ಉಪನ್ಯಾಸಕರಿಗೆ ಸಂಬಂಧಪಟ್ಟ ಪ್ರಾಂಶುಪಾಲರ ಮುಖಾಂತರ
4. ಕಛೇರಿ ಪ್ರತಿ